**<u>ದಿನಾಂಕಃ 01-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಆರ್.ಹೆಚ್., ಜೆಡಿಆರ್ ನಂ. 1 ಮತ್ತು 2 ನೇ ಪರ ವಕೀಲರಿಂದಃ</u>**

**15**. ಪ್ರಸ್ತುತ ದರಾಖಾಸ್ತ ಅರ್ಜಿಯನ್ನು ನಾನು ದಾಖಲ ಮಾಡುವ ಕಾಲಕ್ಕೆ ಅದನ್ನು ಬಸವ್ವ ಇವಳ ಒಟ್ಟು ಮುಕ್ತಿಯಾರ ನಾತೆಯಿಂದ ಶಾಂತಪ್ಪ ಹಾದಿಮನಿ ಇವರು ದಾಖಲಿಸಿರುತ್ತಾರೆ. ಪ್ರಸ್ತುತ ದರಾಖಾಸ್ತ ಅರ್ಜಿಯಲ್ಲಿ ಜಿ.ಪಿ.ಎ.ನ್ನು ಹಾಜರಪಡಿಸಿಲ್ಲ. ಯಾವುದೇ ದಾವೆ, ಅರ್ಜಿ ಅಥವಾ ದೂರನ್ನು ಜಿ.ಪಿ.ಎ., ಮೂಲಕ ದಾಖಲಿಸಬೇಕಾದರೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಬೇಕಾಗುತ್ತದೆ ಅಂದರೆ ಸಾಕ್ಷಿ ನನ್ನ ಪ್ರಕಾರ ಅದರ ಅವಶ್ಯಕತೆ ಇರುವುದಿಲ್ಲ ಅದನ್ನು ದಾವೆಯಲ್ಲಿ ಹಾಜರಪಡಿಸಲಾಗಿದೆ ಅಂತಾ ಹೇಳುತ್ತಾರೆ. ಅಸಲು ದಾವೆ ನಂ. 71/1999 ರ ಪ್ರಿಲಿಮಿನರಿ ಡಿಕ್ರಿಯಲ್ಲಿ ಸಹ ಬಸವ್ವ ಇವಳ ಒಟ್ಟು ಮುಕ್ತಿಯಾರ ಶಾಂತಪ್ಪ ಅಂತಾ ನಮೂದು ಮಾಡಿಲ್ಲ ಅಂದರೆ ಸಾಕ್ಷಿ ನಾವು ದಾಖಲೆ ಹಾಜರಪಡಿಸಿರುತ್ತೇವೆ, ಆದರೆ ಡಿಕ್ರಿಯಲ್ಲಿ ಅದು ಬಂದಿಲ್ಲ ಅಂತಾ ಹೇಳುತ್ತಾರೆ. ಅದೇ ರೀತಿ ಎಫ್.ಡಿ.ಪಿ., 10/2013 ರಲ್ಲಿಯೂ ಸಹ ಜಿ.ಪಿ.ಎ., ಹಾಜರುಪಡಿಸಿಲ್ಲ ಅಂದರೆ ನೆನಪಿಲ್ಲ. ಎಫ್.ಡಿ.ಪಿ., ನಂ. 10/2013 ಹಾಗೂ ಪ್ರಸ್ತುತ ದರಖಾಸ್ತ ಅರ್ಜಿಯನ್ನು ದಾಖಲು ಮಾಡಲು ಬಸವ್ವ ಇವಳು ಅಧಿಕಾರ ನೀಡಿಲ್ಲ ಅಂದರೆ ಸುಳ್ಳು. ನಾನು ಹಾಗೂ ಶಾಂತಪ್ಪ ಮಿಲಾಫೆಯಾಗಿ ಬಸವ್ವ ಇವಳಿಗೆ ಗೊತ್ತಾಗದಂತೆ ಎಫ್.ಡಿ.ಪಿ. ನಂಬರ 10/2013 ಹಾಗೂ ಪ್ರಸ್ತುತ ದರಖಾಸ್ತ ಅರ್ಜಿಯನ್ನು ದಾಖಲಿಸಿರುತ್ತೇವೆ ಅಂದರೆ ಸುಳ್ಳು. ಎಫ್.ಡಿ.ಪಿ. ಹಾಗೂ ದರಖಾಸ್ತ ಅರ್ಜಿಯಲ್ಲಿ ಜಿ.ಪಿ.ಎ., ನ ಪ್ರತಿ ಅವಶ್ಯಕತೆ ಇದೆ ಅಂತಾ ನನಗೆ ಗೊತ್ತಿದ್ದರು ಸಹ ನ್ಯಾಯಾಲಯಕ್ಕೆ ಮೋಸ ಮಾಡಿ, ಆದೇಶ ಪಡೆದಿರುತ್ತೇವೆ ಅಂದರೆ ಸುಳ್ಳು.

**16.** ಬಸವ್ವ ಇವಳು ಮೃತ್ಯು ಪತ್ರ ಬರೆಸುವ ಕಾಲಕ್ಕೆ ಬಸವೇಶ್ವರ ನಗರದ ಪ್ಲಾಟನ ರೇಕಾರ್ಡ ಉತಾರ, ದಾವೆಯ ಅಸಲು ಅರ್ಜಿ, ಹಾಗೂ ಇನ್ನಿತರೇ ದಾಖಲೆಗಳನ್ನು ತಂದಿದ್ದಳು. ಇನ್ನಿತರೇ ದಾಖಲೆಗಳು ಯಾವುವು ಅಂತಾ ನೆನಪಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಬಸವ್ವ ಇವಳು ಯಾವ ಆಸ್ತಿ ನಂಬರದಲ್ಲಿ 1/3 ಹಿಸ್ಸೆ ಅಂತಾ ಬರೆದಿದ್ದಳು ಅಂತಾ ಅದರ ನಂಬರ ಬರೆದಿಲ್ಲ. ದಿನಾಂಕಃ 10-02-2017 ರಂದು ಬಸವ್ವ ಇವಳು ತೀರಿಕೊಂಡಿದ್ದು, ಆ ಬಗ್ಗೆ ನ್ಯಾಯಾಲಯಕ್ಕೆ ನಾವು ಮೇಮೋ ಸಹ ದಾಖಲಿಸಿರುತ್ತೇವೆ ಅಂದರೆ ಸರಿ. ನನ್ನ ಪಕ್ಷಗಾರನಾದ ಶಾಂತಪ್ಪ ಇತನಿಗೆ ಆತನ ತಾಯಿ ಬಸವ್ವ ಇವಳು ನೋಂದಾಯಿತ ಮೃತ್ಯು ಪತ್ರ ಬರೆದು ಇಟ್ಟ ಬಗ್ಗೆ ನಾನು ತಿಳಿಸಿಲ್ಲ. ದಿನಾಂಕಃ 25-02-2017 ರಂದು ಬಸವ್ವ ಇವಳು ತೀರಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ಮೇಮೋ ಸಲ್ಲಿಸಿರುತ್ತೇವೆ ಅಂದರೆ ಸರಿ. ಆ ದಿನ ನಾನು ಸದರಿ ಅರ್ಜಿಯಲ್ಲಿ ದರಖಾಸ್ತದಾರರ ಪರವಾಗಿ ರೀಟೈರ್ಡಮೆಂಟ್ ಮೇಮೋ ಹಾಕಿಲ್ಲ. ದಿನಾಂಕಃ 31-03-2017, 15-04-2017 ಕ್ಕೆ ದರಖಾಸ್ತದಾರರಿಗೆ ನಾನೇ ಹಾಜರಾಗಿರುತ್ತೇನೆ ಅಂದರೆ ಸಾಕ್ಷಿ ಆ ರೀತಿ ಬಂದಿರಬಹುದು ಆದರೆ ನಾನು ನಮ್ಮ ಪಕ್ಷಗಾರರ ಪರವಾಗಿ ಪ್ರಕರಣದಲ್ಲಿ ಹಾಜರಾಗಿಲ್ಲ. ನಾನು ಬಸವ್ವ ಇವಳು ತೀರಿಕೊಂಡ ನಂತರ ವಕಾಲತ್ ರದ್ದಾಗಿರಬಹುದು ಅಂತಾ ರಿಟೈರ್ಡಮೆಂಟ್ ಮೇಮೋ ಹಾಕಿಲ್ಲ.

**17.** ಪಿಡಬ್ಲ್ಯೂ-2 ಶಿವಯೋಗಯ್ಯ ಕಲ್ಯಾಣಮಠ, ಇವರ ಪರಿಚಯವನ್ನು ನನಗೆ ಬಸವ್ವ ಇವಳು ದಿನಾಂಕಃ 19-12-2010 ರಂದು ಪರಿಚಯ ಮಾಡಿಸಿಕೊಟ್ಟಿರುತ್ತಾರೆ. ಅದಕ್ಕಿಂತ ಮುಂಚೆ ನನಗೆ ಅವರ ಪರಿಚಯವಿರಲಿಲ್ಲ. ನಾನು ಶಿವಯೋಗಯ್ಯ (ಪಿಡಬ್ಲ್ಯೂ-2) ಇವರಿಗೆ ನ್ಯಾಯಾಲಯಕ್ಕೆ ಬಂದು ಮೃತ್ಯು ಪತ್ರದ ಬಗ್ಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ಹೇಳಿಲ್ಲ. ಬಸವ್ವ ಇವಳಿಗೆ ಪಾರ್ಶ್ವವಾಯು ಆಗಿದ್ದರಿಂದ ಕಣ್ಣು ಕಾಣುತ್ತಿರಲಿಲ್ಲ ಅಂದರೆ ಸಾಕ್ಷಿ, ಮೃತ್ಯು ಪತ್ರ ಬರೆಯುವ ಕಾಲಕ್ಕೆ ಹಾಗೂ ಅದರ

ನಂತರವೂ ಸಹ ಅವಳಿಗೆ ಕಣ್ಣು ಕಾಣುತ್ತಿತ್ತು. ಪಾರ್ಶ್ವವಾಯುವಿನಿಂದ ಗುಣಮುಖಳಾಗಿದ್ದೇನೆ ಅಂತಾ ಹೇಳುತ್ತಿದ್ದಳು. ಎಫ್.ಡಿ.ಪಿ. 10/2013 ರಲ್ಲಿ ನೋಂದಾಯಿತ ಒಟ್ಟು ಮುಕ್ತಿಯಾರ ಪತ್ರ ಕೊಡಬೇಕಾಗಿದೆ ಅಂತಾ ಹೇಳಿ ನಾನು ಹಾಗೂ ಶಾಂತಪ್ಪ ಮಿಲಾಫೆಯಾಗಿ ಖೊಟ್ಟಿ ಮೃತ್ಯು ಪತ್ರ ಬರೆಸಿಕೊಂಡಿರುತ್ತೇವೆ ಅಂದರೆ ಸುಳ್ಳು. ಮೃತ್ಯು ಪತ್ರ ಅಂತಾ ಹೇಳಿ ಆ ಬಗ್ಗೆ ನಾನಾಗಲೀ, ಶಾಂತಪ್ಪ ಆಗಲೀ ಅಥವಾ ಉಪ ನೋಂದಣಿ ಕಛೇರಿ ಅಧಿಕಾರಿ ಸಹ ಬಸವ್ವ ಇವಳಿಗೆ ಮಾಹಿತಿ ನೀಡಿಲ್ಲ ಅಂದರೆ ಸುಳ್ಳು. ನಿಪಿ-2 ರ ಮೃತ್ಯು ಪತ್ರದಲ್ಲಿ ಬಸವ್ವ ಅಂತಾ ಹೇಳುವ ಹೆಬ್ಬಟ್ಟಿನ ಗುರುತುಗಳು ಇರುತ್ತವೆ ಅಂದರೆ ಸರಿ. ನಿಪಿ-2 ರಲ್ಲಿ ಮೃತ್ಯು ಪತ್ರವನ್ನು ಓದಿ ಹೇಳಿ ಹೆಬ್ಬಟ್ಟಿನ ಗುರುತು ಪಡೆದ ಬಗ್ಗೆ Endorsement ಇರುವುದಿಲ್ಲ ಅಂದರೆ ಸಾಕ್ಷಿ ಪ್ಯಾರಾ ನಂ.-11 ರಲ್ಲಿ Endorsement ಇದೆ ಅಂತಾ ಹೇಳುತ್ತಾರೆ. ಪ್ಯಾರಾ-11 ನ್ನು ಬಸವ್ವ ಇವಳ ಹೆಬ್ಬಟ್ಟಿನ ಗುರುತು ಪಡೆಯುವ ಮೊದಲು ಪ್ರಿಂಟ್ ಮಾಡಿದೆ ಅಂದರೆ ಸಾಕ್ಷಿ ಎಲ್ಲಾ ಬರವಣಿಗೆಯನ್ನು ಒಂದೇ ಬಾರಿಗೆ ಪ್ರಿಂಟ್ ಮಾಡಿದೆ ಅಂತಾ ಹೇಳುತ್ತಾರೆ. ನಿಪಿ-2 ರ ಮೃತ್ಯು ಪತ್ರವನ್ನು ಬಸವ್ವ ಇವಳೇ ಉಪ ನೋಂದಣಿ ಕಛೇರಿಗೆ ನೀಡಿರುತ್ತಾಳೆ. ಆ ಕಾಲಕ್ಕೆ ನಾನು, ಬಸವ್ವ, ಸಾಕ್ಷಿದಾರರಾದ ಶಿವಯೋಗಯ್ಯ, ಜಯಶಂಕರಲಾಲ ಪಟೇಲ್ ಇದ್ದೆವೂ. ನಾನು ನೋಂದಣಿ ಕಛೇರಿಯಲ್ಲಿ ಯಾವುದೇ ಸಹಿ ಮಾಡಿಲ್ಲ. ನಿಪಿ-2 ರ ಪತ್ರಕ್ಕೆ ಬಸವ್ವ ಇವಳ 06 ಹೆಬ್ಬಟ್ಟಿನ ಗುರುತುಗಳನ್ನು ನಮ್ಮ ಕಛೇರಿಯಲ್ಲಿ ದಿನಾಂಕಃ 20-12-2010 ಬೆಳಿಗ್ಗೆ 10-30 ರಿಂದ 11-00 ಘಂಟೆಯವರೆಗೆ ಪಡೆದಿರುತ್ತೇನೆ. ಉಳಿದ ಹೆಬ್ಬಟ್ಟಿನ ಗುರುತುಗಳನ್ನು ಕಂಪ್ಯೂಟರ್ ಸ್ಕ್ಯಾನ್ ಆದ ನಂತರ ಪಡೆದಿರುತ್ತಾರೆ. ನಿಪಿ-2 ನ್ನು ಸಬ್ ರಜಿಸ್ಟರ ಕಛೇರಿಯಲ್ಲಿ ಹಾಜರಪಡಿಸಿದ ನಂತರ ಎಲ್ಲಿಯೂ ದಾಖಲೆಯನ್ನು ಓದಿ ಹೇಳಿ ಹೆಬ್ಬಟ್ಟಿನ ಗುರುತು ಪಡೆದಿದೆ ಅಂತಾ ಬರೆದಿಲ್ಲ ಅಂದರೆ ಸಾಕ್ಷಿ ದಾಖಲೆಯಲ್ಲಿ ಬರೆದಿದ್ದನ್ನು ಹೊರತು ಪಡಿಸಿ ಬೇರೆ ಎಲ್ಲಿಯೂ ಆ ರೀತಿ ಬರೆದಿಲ್ಲ ಅಂತಾ ಹೇಳುತ್ತಾರೆ. ಆ ರೀತಿ ಬಸವ್ವ ಇವಳಿಗೆ ಓದಿ ಹೇಳಿ ಅವಳ ಹೆಬ್ಬಟ್ಟಿನ ಗುರುತು ಪಡೆದಿದ್ದರೆ, ಆ

Endorsement ನ್ನು ಆಮೇಲೆ ಬರೆಯುತ್ತಿದ್ದಿರಿ ಅಂದರೆ ಸಾಕ್ಷಿ ಓದಿ ಹೇಳಿರುತ್ತೇನೆ ಅಂತಾ ಹೇಳುತ್ತಾರೆ. ಶಾಂತಪ್ಪ ಈತನ ಮಾತು ಕೇಳಿ ಆತನ ದುಡ್ಡಿನ ಪ್ರಭಾವದಿಂದ ಬಸವ್ವ ಇವಳು ನನ್ನನ್ನು ವಕೀಲರು ಅಂತಾ ನಂಬಿದ್ದರಿಂದ ಅವಳಿಗೆ ಮೋಸ ಮಾಡಿ, ಸುಳ್ಳು ಮೃತ್ಯು ಪತ್ರ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ಬಸವ್ವ ಇವಳು ದಿನಾಂಕಃ 19-12-2010 ಅಥವಾ 20-12-2010 ರಲ್ಲಿ ಬಸವ್ವ ಇವಳು ನಮ್ಮ ಕಛೇರಿಗೆ ಬಂದಿಲ್ಲ ಹಾಗೂ ಮೃತ್ಯು ಪತ್ರ ಬರೆಯಲು ಯಾವುದೇ ಮಾಹಿತಿ ನನಗೆ ನೀಡಿಲ್ಲ  ಅಂದರೆ ಸುಳ್ಳು. ಬಸವ್ವ ಇವಳು ಮೃತ್ಯು ಪತ್ರ ಬರೆಯುವ ಮನಸ್ಥಿತಿಯಲ್ಲಿ ಇರಲಿಲ್ಲ ಅಂದರೆ ಇದ್ದಳೂ ಅಂತಾ ಹೇಳುತ್ತಾರೆ. ಅಸಲು ದಾವಾ ನಂ 71/1999 ರಲ್ಲಿ ಡಿಕ್ರಿಯಾದ ನಂತರ ತನ್ನ ಸೊಸೆಯಾದ ರೇಖಾ ಅಲಿಯಾಸ ಸುರೇಖಾ ಹಾಗೂ ಅಭೀಷೇಕ ಈತನ ಬಳಿ ಇರುತ್ತಿದ್ದಳು, ಅವಳಿಗೆ ಎಫ್‌ಡಿಪಿ ಹಾಗೂ ಪ್ರಸ್ತುತ ದರಖಾಸ್ತ ಅರ್ಜಿ ಹಾಕುವ ಯಾವುದೇ ಇಚ್ಛೆ ಇರಲ್ಲಿ ಅಂದರೆ ಸಾಕ್ಷಿ ನನಗೆ ಆ ಬಗ್ಗೆ ಹೇಳಿಲ್ಲ ಅಂತಾ ಹೇಳುತ್ತಾರೆ. ನನಗೆ ಶಾಂತಪ್ಪನ ಪರವಾಗಿ ಮೃತ್ಯು ಪತ್ರ ಮಾಡಿಸುವ ಅತೀಯಾದ ಆಸಕ್ತಿ ಇತ್ತು ಅಂದರೆ ಸುಳ್ಳು. ಆ ಕಾರಣದಿಂದ ಈ ಮೃತ್ಯು ಪತ್ರವನ್ನು ತಯಾರಿಸಿರುತ್ತೇನೆ ಅಂದರೆ ಸುಳ್ಳು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 01-04-2024**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.